# ಬೆಂಗಳೂರು ಉತ್ತರ ವಿಶ್ವವಿದ್ಯಾಲಯ

ಟಮಕ, ಕೋಲಾರ-563 103

ಸಂಖ್ಯೆ: ಬೆಂ.ಉ.ವಿ.ವಿ./1430/2023-24 ದಿನಾಂಕ: 02.01.2024

## ಪತ್ರಿಕಾ ಪ್ರಕಟಣೆ

ಗೆ,

ಸಂಪಾದಕರು/ವರದಿಗಾರರು

________________

________________

ಮಾನ್ಯರೆ,

### ಬೆಂಗಳೂರು ಉತ್ತರ ವಿವಿಯ ಸ್ಪಷ್ಟೀಕರಣ

ಇತ್ತೀಚೆಗೆ ಪತ್ರಿಕೆಗಳಲ್ಲಿ ಬೆಂಗಳೂರು ಉತ್ತರ ವಿವಿಯು ಸಂಯೋಜಿತ ಕಾಲೇಜೊಂದರಲ್ಲಿ ಒಂದು ಪತ್ರಿಕೆಯ ಮರು ಪರೀಕ್ಷೆ ನಡೆಸಿದ್ದರ ಬಗ್ಗೆ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಅಪಪ್ರಚಾರ ನಡೆಸುತ್ತಿರುವುದು ಗಮನಕ್ಕೆ ಬಂದಿದ್ದು, ಈ ಕೆಳಗಿನ ಸ್ಪಷ್ಟೀಕರಣ ನೀಡಬಯಸುತ್ತದೆ.

ನಮ್ಮ ವಿವಿಗೆ ಸಂಯೋಜನೆಗೊಂಡ ಕೃಪಾನಿಧಿ ಕಾಲೇಜಿನ ಎಂ.ಬಿ.ಎ. ವಿದ್ಯಾರ್ಥಿಗಳು ವಿದ್ಯಾರ್ಥಿ ವಿನಿಮಯ ಕಾರ್ಯಕ್ರಮದಡಿ ಮಲೇಶಿಯಾಗೆ ಹೋಗಿದ್ದು, ಅವರು ವಾಪಸ್ಸು ಬರುವಾಗ ಒಂದು ಪರೀಕ್ಷೆ ಮುಗಿದು ಹೋಗುವುದರಿಂದ ಅದೊಂದು ಪರೀಕ್ಷೆ ಮುಂದೆ ಹಾಕಬೇಕೆಂದು ಕೋರಿರುತ್ತಾರೆ. ಆದರೆ, ಇನ್ನುಳಿದ ಕಾಲೇಜುಗಳಲ್ಲಿ ಪರೀಕ್ಷೆ ನಡೆಯಬೇಕು ಎಂಬ ಕಾರಣಕ್ಕೆ ಪರೀಕ್ಷೆ ಮುಂದೆ ಹಾಕಲು (Postpone) ವಿಶ್ವವಿದ್ಯಾಲಯ ಒಪ್ಪಲಿಲ್ಲ ಹಾಗು ಕೃಪಾನಿಧಿ ಕಾಲೇಜ್ ಆಫ್ ಮ್ಯಾನೇಜ್‌ಮೆಂಟ್ ಕಾಲೇಜಿಗೆ ಪರೀಕ್ಷೆ ಮುಂದೂಡಲು ವಿವಿಯು ಒಪ್ಪಿಗೆ ನೀಡಿರುವುದಿಲ್ಲ.

ಪರೀಕ್ಷೆಗಳು ಮುಗಿದಾಗ ಒಂದು ಪೇಪರಿನಲ್ಲಿ ಈ ಕಾಲೇಜಿನ 235 ವಿದ್ಯಾರ್ಥಿಗಳು ಪರೀಕ್ಷೆ ವಂಚಿತರಾಗಿರುವ ವಿಷಯ ತಿಳಿಯಿತು ವಿದ್ಯಾರ್ಥಿಗಳು ನಿರಂತರವಾಗಿ ತಮಗೆ ನ್ಯಾಯ ಒದಗಿಸಬೇಕೆಂದು ವಿಶ್ವವಿದ್ಯಾಲಯವನ್ನು ಕೋರಿದರು. ಇಲ್ಲಿ 235 ವಿದ್ಯಾರ್ಥಿಗಳ ಭವಿಷ್ಯವೂ ಅಡಗಿತ್ತು. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಹಾಗೂ ಕಾಲೇಜಿನವರ ಕೋರಿಕೆಯ ಮೇರೆಗೆ ವಿವಿಯ ಅಧಿಕಾರಿಗಳು ಸಭೆ ಸೇರಿ ಕಾಲೇಜು ಮಾಡಿದ ತಪ್ಪಿಗೆ ವಿದ್ಯಾರ್ಥಿಗಳ ಭವಿಷ್ಯ ಹಾಳಾಗಬಾರದೆಂಬ ಏಕೈಕ ಕಾರಣದಿಂದ ಈ ಪರೀಕ್ಷೆಯ ಖರ್ಚನ್ನು ಕಾಲೇಜಿನಿಂದ ಭರಿಸಿ, ಆ ಪತ್ರಿಕೆಯಲ್ಲಿ ಮರು ಪರೀಕ್ಷೆ ನಡೆಸಲು ನಿರ್ಧರಿಸಿದೆವು ಹಾಗೂ ಈ ಪರೀಕ್ಷೆ ನಿಗದಿಯಂತೆ ನಡೆದು ಫಲಿತಾಂಶ ಬರಬೇಕಾಗಿದೆ. ಈ ಪರೀಕ್ಷೆ ನಡೆಸಿದ್ದಕ್ಕೆ ವಿಶ್ವವಿದ್ಯಾಲಯವು ಜನರಿಂದ ಟೀಕೆಗೊಳಗಾಗಿದೆ ಎಂಬುದು ತಪ್ಪು. ಯಾಕೆಂದರೆ ವಿದ್ಯಾರ್ಥಿಗಳು ಹಾಗೂ ಅವರ ಪಾಲಕರು ಪರೀಕ್ಷೆ ನಡೆಸಿದ್ದಕ್ಕೆ ವಿಶ್ವವಿದ್ಯಾಲಯಕ್ಕೆ ಅಭಿನಂದನೆ ಹೇಳಿದ್ದಾರೆ.

ಈ ಹಿನ್ನೆಲೆಯಲ್ಲಿ ವಿವಿಯು ಪ್ರಜ್ಞಾ ಪೂರ್ವಕವಾಗಿ ಕೈಗೊಂಡ ಈ ಕ್ರಮ ವಿದ್ಯಾರ್ಥಿಗಳ ಹಿತ ಕಾಯುವುದಾಗಿದ್ದು ಜನ ಅಪ ಪ್ರಚಾರಕ್ಕೆ ಕಿವಿಗೊಡಬಾರದು ಎಂದು ಕೋರುತ್ತೇವೆ.

2/01/24

ಕುಲಸಚಿವರು(ಮೌಲ್ಯಮಾಪನ)

ಕುಲಸಚಿವರು (ಮೌಲ್ಯಮಾಪನ)
ಬೆಂಗಳೂರು ಉತ್ತರ ವಿಶ್ವವಿದ್ಯಾಲಯ
ಟಮಕಾ, ಕೋಲಾರ - ಕರ್ನಾಟಕ - 563 103.